ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಮೆಟ್ರೋ ರೈಲು ನಿಗಮ ಕುರಿತು

ಶ್ರೀ ಕಾಂತರಾಜು( ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) -

467 (694) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರು ಮೆಟ್ರೋ ರೈಲು ನಿಗಮದ ಕಾರ್ಯಾಚರಣೆ ಮತ್ತು ಮಾನವ ಸಂಪನ್ಮೂಲ ಹಾಗೂ ಯೋಜನಾ (Project) ವಿಭಾಗದಲ್ಲಿ ಗುತ್ತಿಗೆ ಮತ್ತು ನಿಯೋಜನೆ ಹಾಗೂ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವವರ ಪೈಕಿ ಎಷ್ಟು ಜನ ಹೊರ ರಾಜ್ಯದವರು ಇದ್ದಾರೆ; ಅದರಲ್ಲಿ ಮುಖ್ಯ ಕಾರ್ಯ ನಿರ್ವಾಹಣೆ (Key Position) ಹುದ್ದೆಗಳಲ್ಲಿ ಎಷ್ಟು ಜನ ಕಾರ್ಯ ನಿರ್ವಹಿಸುತ್ತಿದ್ದಾರೆ; (ವಿವರವಾದ ಮಾಹಿತಿ ನೀಡುವುದು)

(ಆ) BMRC ರವರು ಬೆಂಗಳೂರು ಮೆಟ್ರೋ ನಿಗಮದಲ್ಲಿ 62 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಿನವರು ಕಾರ್ಯ ನಿರ್ವಹಿಸಲು ನಿರ್ಭಂದ ಹೇರಿರುವುದು ನಿಜವೇ; ಹಾಗಾದರೆ ನಿಗಮವು 75 ವರ್ಷದ ವಯಸ್ಸಿನವರನ್ನು ನೇಮಕ ಮಾಡುತ್ತಿರುವುದು ಸರಿಯೇ; (ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ನಿಗಮದಲ್ಲಿ ಒಂದೇ ವೃಂದ ಅಥವಾ ಸಮಾನ ವೃಂದದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಿಬ್ಬಂದಿಗಳಲ್ಲಿ ಕಿರಿಯ ಸಿಬ್ಬಂದಿ ಬಡ್ತಿ ಹೊಂದಿದಾಗ ಜೇಷ್ಠತೆಯಲ್ಲಿ ಮೊದಲನೇ ಸಿಬ್ಬಂದಿಗಿಂತ ಕಿರಿಯ ಸಿಬ್ಬಂದಿಗೆ ಹೆಚ್ಚಿನ ವೇತನ ನೀಡುತ್ತಿರುವುದು ಸರಿಯೇ; (ವಿವರವಾದ ಮಾಹಿತಿ ನೀಡುವುದು)

(ಈ) ನಿಗಮದ ಹೆಚ್. ಆರ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಯಾರು ಯಾರು; ಅವರ ಹೆಸರು, ವಿದ್ಯಾರ್ಹತೆ, ಹುದ್ದೆ, ವಿಳಾಸದೊಂದಿಗೆ ಮಾಹಿತಿ ನೀಡುವುದು; ಇವರುಗಳಿಗೆ ಹೆಚ್.ಆರ್. ಕೆಲಸದಲ್ಲಿ 15 ವರ್ಷಗಳ ಅನುಭವ ಇದೆಯೇ; ಅಥವಾ ಹೆಚ್. ಆರ್. ಸ್ನಾತಕ ಪದವಿ ಪಡೆದಿದ್ದಾರೆಯೇ? (ವಿವರವಾದ ಮಾಹಿತಿ ನೀಡುವುದು)